ಜಿಟಿಜಿಟಿ ಮಳೆಯ ಹಿನ್ನೆಲೆಯಲ್ಲಿ ಆಷಾಢದ ಹಿನ್ನೆಲೆ – ಶ್ರಾವಣದ ಮುನ್ನೆಲೆಯ ಸಂಭ್ರಮವೊಂದೆಡೆಯಾದರೆ ಕಳ್ಳತನದ ಭರಾಟೆ ಇನ್ನೊಂದೆಡೆ. ಈ ಕಳ್ಳರ ಕುರಿತಾಗಿ ಒಂದಷ್ಟು ಮಾಹಿತಿಯೆಂದರೆ, ದಿನನಿತ್ಯ ಕಾಣಸಿಗುವ ಇವರು ನಾವೆಷ್ಟೇ ಎಚ್ಚರಿಕೆಯಿಂದಿದ್ದರೂ ಅದ್ಯಾವ ಮಾಯದಲ್ಲೋ ತಮ್ಮ ಕರಾಮತ್ತು ತೋರಿಸಿ ನಾವು ಚಾಪೆ ಕೆಳಗೆ ತೂರಿದರೆ ಇವರು ರಂಗೋಲಿ ಕೆಳಗೇ ತೂರುವಷ್ಟು ಚಾಣಾಕ್ಷಮತಿಗಳಾಗಿರುತ್ತಾರೆ. ಇವರಲ್ಲಿ ಬಡವ ಬಲ್ಲಿದನೆಂಬ ಭೇದವಿಲ್ಲ; ವಯಸ್ಸಿನ ಹಂಗಿಲ್ಲ; ಲಿಂಗ ತಾರತಮ್ಯವಂತೂ ಇಲ್ಲವೇ ಇಲ್ಲ. ಮುಖತಃ ಭೇಟಿಯಾದಾಗ ಬಾಯಿ ತುಂಬಾ ಹರಟುತ್ತಾ ಆಪ್ತರಾಗಿ ವ್ಯವಹರಿಸುವ ಇವರಲ್ಲಿನ ಸುಷುಪ್ತ ಚೋರವಿದ್ಯೆ ಮಾತ್ರ ಹಬ್ಬ ಹರಿದಿನಗಳಲ್ಲಿ ಅತೀ ಜಾಗೃತವಾಗಿ ಕೆಲವೊಮ್ಮೆ ಭಂಡತನಕ್ಕೂ ಹೋಗುವುದುಂಟು!

ಇನ್ನಿವರಲ್ಲಿ ಕೆಲವರಂತೂ ತಂತಮ್ಮ ಮನೆಗಳಲ್ಲಿದ್ದುಕೊಂಡೇ ನೆರೆಹೊರೆಯೊಟ್ಟಿಗೆ ಆತ್ಮೀಯವಾಗಿದ್ದು, ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಕಳ್ಳತನ ನಡೆಸಿಬಿಡುವಷ್ಟು ಕುಶಾಗ್ರಮತಿಗಳು. ಆ ದಿವ್ಯ ಕೈಚಳಕಕ್ಕೆ ಮನದಲ್ಲೇ ಶಪಿಸಿಕೊಂಡರೂ ಬೆರಗಾಗದೇ ಇರಲಾಗದು. ಈಗಾಗಲೇ ನಿಮಗೆಲ್ಲರಿಗೂ ಈ ವಿಶಿಷ್ಟ ಕಳ್ಳರ ಜಾಡು ಸಿಕ್ಕಿರಬಹುದು. ನಿಮ್ಮ ಊಹೆ ನಿಜ, ಎಲ್ಲೆಲ್ಲೂ ಇರುವ, ಎಲ್ಲ ಕಾಲಕ್ಕೂ ಸಲ್ಲುವ ಇವರು ಹೂ ಕಳ್ಳರು! ವಿಷಯದ ವಿವರ ಇಲ್ಲಿದೆ.

ಕಾಂಕ್ರೀಟಿನ ಪುಟ್ಟ ಮನೆಯಲ್ಲಿ ಇದ್ದ ಸ್ವಲ್ಪವೇ ಜಾಗದಲ್ಲಿ ದೇವರ ಪೂಜೆಗೆಂದೇ ಒಂದೆರಡು ದಾಸವಾಳದ ಗಿಡಗಳನ್ನು ಮುತುವರ್ಜಿಯಿಂದ ಬೆಳೆಸಿದ್ದಾಗಿತ್ತು. ಸಾಮಾನ್ಯವಾಗಿ ಬೆಳಗ್ಗೆಯೇ ಪೂಜೆಗೆಂದು ಹೂ ಕೊಯ್ದಿಡುವುದು ರೂಢಿ. ಆದರೆ ಹಬ್ಬಹರಿದಿನಗಳು, ಕೆಲವು ವಿಶೇಷ ದಿನ ಮತ್ತು ಶ್ರಾವಣ ಮಾಸದಲ್ಲಂತೂ ರೂಢಿಸಿಕೊಂಡದ್ದು ವ್ಯರ್ಥವೇ ಸೈ, ಕಾರಣ ಗಿಡದಲ್ಲಿ ಹೂವೇ ಇರುತ್ತಿರಲಿಲ್ಲ. ಹಿಂದಿನ ದಿನ ಮೊಗ್ಗುಗಳಿಂದ ನಳನಳಿಸುತ್ತಿದ್ದ ಗಿಡದಲ್ಲಿ ಬೆಳಗ್ಗೆ ಹೂವೊಂದೂ ಇರದೇ ಮಾಯವಾಗಿ ಭಗವಂತನನ್ನು ಹೂಗಳಲ್ಲಿ ಮುಳುಗಿಸಿ ಪೂಜಿಸುವ ಉತ್ಸಾಹಕ್ಕೆ ನೀರೆರೆಚಿದಂತಾಗಿತ್ತು. ಸರಿ, ಇದಕ್ಕೂ ಒಂದು ಉಪಾಯ ಕಂಡುಕೊಂಡೆ.



ಹಿಂದಿನ ದಿನ ಸಂಜೆಯೇ ಗಿಡದಲ್ಲಿನ ಮೊಗ್ಗುಗಳನ್ನು ಕೊಯ್ದು ನೀರಲ್ಲಿಟ್ಟು ಮರುದಿನ ಪೂಜೆಗೆ ಬಳಸಿ ಜಾಣತನ ಮೆರೆದು ಬೀಗಿದೆ. ಆದರೆ ಇದರ ಸುಳಿವೂ ಹಿಡಿದ ಪಾಕಡಾಗಳು ಮುಂಚಿನ ಮಧ್ಯಾಹ್ನವೇ ಕದಿಯಲು ಆರಂಭಿಸಿದ್ದರು! ಇದು ಗೊತ್ತಾದದ್ದು ಎರಡನೇ ಮಂಗಳವಾರದ ಹಿಂದಿನ ಮಧ್ಯಾಹ್ನವಷ್ಟೇ. ಊಟ ಮುಗಿಸಿ ಸ್ವಲ್ಪ ಹೊತ್ತು ಓದುತ್ತಾ ಅಡ್ಡಾಗುವ ನನ್ನ ನೆಚ್ಚಿನ ಕಾಯಕಕ್ಕೆ ಕಿಟಕಿಯಿಂದ ಹೊರಗಡೆ ಕಾಣುತ್ತಿದ್ದ ದಾಸವಾಳದ ಗಿಡದ ಅಸಹಜ ಅಲುಗುವಿಕೆ ಭಂಗ ತಂದಿತ್ತು. ಗಡಬಡಿಸಿ ಎದ್ದು ಕಿಟಕಿಯಲ್ಲಿ ಇಣುಕಿದ್ದೆ. ಪಕ್ಕದ ಮನೆಯ ಹಿರಿಯ ನಾಗರಿಕ ಮಹಿಳೆ ಕೈಯಲ್ಲಿ ಕೊಕ್ಕೆ ಹಿಡಿದು ಬಟ್ಟಲಲ್ಲಿ ಹೀಚು ಮೊಗ್ಗುಗಳನ್ನು ತುಂಬಿಕೊಂಡು ಸಂತೃಪ್ತ ಭಾವದಲ್ಲಿದ್ದದ್ದು ಕಂಡಿತ್ತು. ಕೆಲವು ಟೊಂಗೆಗಳ ಗೋಣೂ ಮುರಿದಿತ್ತು! ಕದ್ದದ್ದಂತೂ ಸರಿಯೇ ಸರಿ, ಬೆಳೆದವರ ಸಲುವಾಗಿ ಒಂದೆರಡು ಮೊಗ್ಗನ್ನಾದರೂ ಬಿಡಬೇಕಿತ್ತಲ್ಲವೇ ಬಿಡಿ, ನಿಮ್ಮದು ಬರೀ ವ್ಯರ್ಥಾಲಾಪ ಎನ್ನುತ್ತಿದ್ದೀರಾ ಮತ್ತೆ ಆತ್ಮೀಯ ಕಳ್ಳರಿಗೇನೆನ್ನಲು ಸಾಧ್ಯ?

ಆ ದಿನ ಸಂಜೆ ಕಟ್ಟೇ ಪುರಾಣದಲ್ಲಿದ್ದಾಗ ನೇರವಾಗಿ ಹೇಳಲಾಗದೇ, ‘ನೋಡ್ರೀ ಮಾಮಿ, ಒಂದೂ ಮೊಗ್ಗಿಲ್ಲ ಯಾರೋ ಖದೀಮರು ಕದ್ದುಬಿಟ್ಟಿದ್ದಾರೆ. ಕದ್ದು ಪೂಜೆ ಮಾಡಿದ್ರೆ ಪುಣ್ಯ ಸಿಗುತ್ತಾ, ಇವ್ರೆಂಥಾ ಜನರಿರಬಹುದು ಅಲ್ವೇನ್ರೀ?’ ಎಂದು ನಯವಾಗಿಯೇ ವಿಷಯಕ್ಕೆ ಬಂದಿದ್ದೆ.

‘ಹೌದು ನೋಡ್ರೀ, ಬ್ಯಾರೇ ವ್ಯಾಳ್ಯಾದಾಗ ಎಂಥಾ ಛಂದ ಹೂ ಬಿಟ್ಟಿರ್ತಾವ ಆದ್ರ ಈಗ್ನೋಡ್ರೀ ಮಂಗಳಮ್ಮನ ಹಬ್ಬಕ್ಕ ವಂದೂ ಹೂ ಇಲ್ಲಂದ್ರ!? ನೋಡ್ರೀ, ನಾನಂತೂ ನಿಮ್ಮ ಮನೀದ್ ವಂದೇ ವಂದ್ ಎಲೀ ತೊಪ್ಲ ಬೇಕಂದ್ರೂ ನಿಮ್ಮನ್ನ ಕೇಳೇ ಕೀಳೋದು ಅಷ್ಟಕ್ಕೂ ಬಸ್ಸು ಫ್ರೀ ಅದ, ಪ್ಯಾಟೀಗ್ ಹೋದ್ವಂದ್ರ ಸಾಕಷ್ಟು ಹೂ ಸಸ್ತಾದಾಗ ತರ್ಬಹುದು, ಮತ್ತೊಬ್ರ ಮನೀದು ಎದಕ್ಕ ಬೇಕು?’

ಸತ್ಯದ ತಲೆ ಮೇಲೆ ಹೊಡೆದಂತೆ ಹೇಳಿದ ವರಸೆಗೆ ಮಾತು ಹೊರಡದೇ ನನ್ನದೇ ತಪ್ಪೆನ್ನುವಂತೆ ಪೆದ್ದುಪೆದ್ದಾಗಿ ಪ್ರತಿಕ್ರಿಯಿಸಿದ್ದೆ. ಕಳ್ಳರು ಯಾರೆಂದು ಗೊತ್ತಿದ್ದರೂ ಏನೂ ಮಾಡಲಾಗದ ದುಃಸ್ಥಿತಿಗೆ ಮೈ ಪರಚಿಕೊಳ್ಳುವಂತಾಗಿತ್ತು.

ಅಕ್ಕಪಕ್ಕದವರಲ್ಲಿ ಸೌಹಾರ್ದತೆ ಇರಬೇಕೆನ್ನುವುದು ನಮಗೆ ಅನ್ವಯಿಸಿದಂತೆ ಅವರಿಗೂ ಅನ್ವಯಿಸುವುದಿಲ್ಲವೇ? ಕಳ್ಳರಿವರೇ ಎನ್ನುವುದು ಗೊತ್ತಿದ್ದರೂ ವಾದ ಮಾಡಿ, ನಿಂದಿಸಿ ಮುಖ ಮುರಿದುಕೊಳ್ಳುವುದು ನನ್ನಿಂದಾಗದ್ದರಿಂದ ಸಹಿಸಿಕೊಳ್ಳಲೇಬೇಕಿದೆ. ಹಾಗಾಗಿಯೇ ತುಟಿಪಿಟಿಕ್ಕೆನ್ನದೇ ಸೌಜನ್ಯ ಮೆರೆಯುತ್ತಾ ಇಂತಹ ಆತ್ಮೀಯ ಭಂಡ ಕಳ್ಳರನ್ನು ವರಲಕ್ಷ್ಮಮ್ಮನ ದಿನ ಶುಕ್ರವಾರದಂದು ಅರಿಶಿನ ಕುಂಕುಮಕ್ಕೆ ಕರೆದು ಉಡಿ ತುಂಬಿ ನಗುನಗುತ್ತಲೇ ಬೀಳ್ಕೊಟ್ಟು ಹಬ್ಬವನ್ನು ಸಾಂಗವಾಗಿ ನಿಭಾಯಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದೇನೆ.

ಸ್ನೇಹ, ಸೌಹಾರ್ದತೆಗಾಗಿ ಹಪಹಪಿಸುವ ದಿನಮಾನ ಇದಾದ್ದರಿಂದ ಮನದಲ್ಲಿ ಜ್ವಾಲಾಮುಖಿಯೇ ಇದ್ದರೂ ಹಲ್ಕಿರಿದು ಆತ್ಮೀಯತೆ ಮೆರೆಯುತ್ತಿದ್ದೇನೆ. ಆದರೀಗ ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ ನಾನೂ ಚಾಣಾಕ್ಷಮತಿಯಾಗಿದ್ದೇನೆ (ಹಾಗೆಂದುಕೊಂಡಿದ್ದೇನೆ). ಇನ್ನಾವ ಉಪಾಯ ಇವಳದ್ದಿರಬಹುದು ಅಂದುಕೊಳ್ಳುತ್ತಿದ್ದೀರಾ ಅತೀ ಹೀಚು ಮೊಗ್ಗುಗಳನ್ನು ಹಿಂದಿನ ದಿನ ಬೆಳಗ್ಗೆಯೇ ಕೊಯ್ದಿಡಲಾರಂಭಿಸಿದ್ದೇನೆ!

ಪ್ರತಿಕ್ರಿಯಿಸಿ: feedback@sudha.co.in